ಓ ಎಸ್ ನಂಃ349/2020

**ಪಿ. ಡಬ್ಲ್ಯೂ ಃ 1**

**ದಿಃ 21.07.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲು ಃ ಪ್ರತಿವಾದಿಗಳ ಪರ ಶ್ರೀ ಆರ್ ಎಸ್ ವಕೀಲರಿಂದ ಃ**

ನಾನು ಕಳೆದ 30 ವರ್ಷಗಳಿಂದ ಬೆಂಗಳೂರಿನ ಸೀಗೆಹಳ್ಳಿ ಗೇಟ್ ನಲ್ಲಿ ವಾಸವಾಗಿದ್ದೆನೆಂದರೆ ಸರಿ. ನಮ್ಮ ಕುಟುಂಬದ ಆಧಾರ್ ಕಾರ್ಡ್ ಮತ್ತು ರೇಷನ್ ಕಾರ್ಡ್ ಗಳು ಸೀಗೆಹಳ್ಳಿ ವಿಳಾಸಕ್ಕೆ ಬರುತ್ತವೆ ಎಂದರೆ ಸರಿ. ಮುತ್ತಯ್ಯ ಇವರು ನಮ್ಮ ತಾತ ಎಂದು ತೋರಿಸಲು ದಾಖಲೆ ಕೊಟ್ಟಿಲ್ಲ. ದಾವಾ ಸ್ವತ್ತಿನ ಪೂರ್ವಕ್ಕೆ ಅರಸಪ್ಪ ಇವರ ಮಗ ರುದ್ರಯ್ಯ ಇದ್ದಾರೆ ಎಂದರೆ ಸರಿ. ಪಶ್ಚಿಮಕ್ಕೆ ಹೊಸಳಪ್ಪ ಇವರ ಮಗ ರುದ್ರಯ್ಯ ಇರುತ್ತಾರೆ ಎಂದರೆ ಸರಿ ಜೊತೆಗೆ ಅಲ್ಲಿ ಗೋಮಾಳದ ಸ್ವತ್ತು ಇರುತ್ತದೆ ಎಂದು ಸಾಕ್ಷಿ ಹೇಳುತ್ತಾರೆ. ಉತ್ತರಕ್ಕೆ ಹನುಮಂತಯ್ಯ ಇರುತ್ತಾರೆ ಎಂದರೆ ಸರಿಯಲ್ಲ. ಅಲ್ಲಿ ನಮ್ಮದೇ ಜಮೀನು ಇರುತ್ತದೆ ಎಂದು ಸಾಕ್ಷಿ ಹೇಳುತ್ತಾರೆ. ದಕ್ಷಿಣಕ್ಕೆ ಗುಡ್ಡ ಇರುತ್ತದೆ ಎಂದರೆ ಸರಿ. 1942-43 ರಲ್ಲಿಯೇ ಸಾಗುವಳಿ ಚೀಟಿಯನ್ನು ನಮ್ಮ ತಾತನಿಗೆ ಕೊಟ್ಟಿದ್ದರು, ಅದು ಸಿಗುತ್ತಿಲ್ಲ, ಸಿಕ್ಕ ತಕ್ಷಣ ಕೊಡುತ್ತೇನೆಂದು ಸಾಕ್ಷಿ ಹೇಳುತ್ತಾರೆ.

ಮುತ್ತಯ್ಯ ತೀರಿಕೊಂಡು 40 ವರ್ಷವಾಗಿದೆ. ನಮ್ಮ ತಾತ ಇದ್ದಾಗಲೇ ಸಾಗುವಳಿ ಚೀಟಿ ಕಣ್ಮರೆಯಾಗಿತ್ತು. ಆ ಬಗ್ಗೆ ಮುತ್ತಯ್ಯ ಇವರು ಪೊಲೀಸರಿಗೆ ದೂರು ಕೊಟ್ಟಿಲ್ಲ. ಸಾಗುವಳಿ ಚೀಟಿ ಕಳೆದು ಹೋದ ಬಗ್ಗೆ 2003-04 ರಲ್ಲಿ ನಾನು ದೂರು ಕೊಟ್ಟಿದ್ದೇನೆ. ಸಾಗುವಳಿ ಚೀಟಿಯನ್ನು ತಹಶೀಲ್ದಾರ್ ಇವರಿಂದ ತೆಗೆದುಕೊಂಡಿದ್ದೇನೆ. ಆದರೆ ನ್ಯಾಯಾಲಯಕ್ಕೆ ಕೊಟ್ಟಿಲ್ಲ. ನಮ್ಮ ತಾತ ಸಾಗುವಳಿ ಮಾಡುತ್ತಿದ್ದ ಬಗ್ಗೆ ದಾಖಲೆಗಳನ್ನು ನಾನು ನೋಡಿದ್ದೇನೆ. ನಮ್ಮ ತಾತನಿಗೆ ಸರ್ಕಾರದವರು ಜಮೀನು ಮಂಜೂರು ಮಾಡಿದ್ದಾರೆಂದು 25 ವರ್ಷಗಳ ಹಿಂದೆ ಗೊತ್ತಾಯಿತು. ಜಮೀನು ಸ್ವಾಧೀನವನ್ನು ಬಿಟ್ಟುಕೊಡಿ ಎಂದು ಪ್ರತಿವಾದಿಗಳನ್ನು ಕೇಳಿಲ್ಲ. ಏಕೆಂದರೆ ನಾವೇ ಸ್ವಾಧೀನದಲ್ಲಿರುತ್ತೇವೆ ಎಂದು ಸಾಕ್ಷಿ ಹೇಳುತ್ತಾರೆ. ನಮ್ಮ ತಾತನಿಗೆ ಒಬ್ಬ ಗಂಡು ಮಗ, 3 ಜನ ಹೆಣ್ಣು ಮಕ್ಕಳಿದ್ದರು ಅವರೆಲ್ಲರು ತೀರಿಕೊಂಡಿದ್ದಾರೆ. ನಾನು ನನ್ನ ಕೇಸ್ ನಲ್ಲಿ ನಮ್ಮಗಳ ಮದ್ಯೆ ಭಾಗ ಆಗಿದೆ ಎಂದು ನಾನು ಹೇಳಿಲ್ಲ. ನಮ್ಮ ವಕೀಲರಿಗೆ ದಾವಾ ಸ್ವತ್ತು ಮೌಖಿಕ ವಿಭಾಗದಲ್ಲಿ ನನಗೆ ಬಂದಿದೆ ಎಂದು ನಾನು ಹೇಳಿಲ್ಲ.

ಸ.ನಂ. 52 ಒಟ್ಟು 287 ಎಕರೆ ಇರುತ್ತದೆ. ಅದರಲ್ಲಿ ಸುಮಾರು 30-40 ಜನ

ಸ್ವಾಧೀನದಲ್ಲಿರುತ್ತಾರೆ. ಪ್ರತಿವಾದಿಗಳು ಸ.ನಂ. 52 ರಲ್ಲಿ ಸ್ವಾಧೀನದಲ್ಲಿಲ್ಲ ಅವರು ತಮ್ಮ ಸ್ವತ್ತಿನ ಜಾಗ ಹುಡುಕಿಕೊಂಡಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ನಾನು 1ನೆ ಪ್ರತಿವಾದಿಯ ಗಂಡ ಮುತ್ತುರಾಜು ಇವರನ್ನು ನೋಡಿದ್ದೇನೆ. ನಮ್ಮ ತಾತನ ಹೆಸರಿನಲ್ಲಿದ ಸ್ವತ್ತನ್ನು ನಮ್ಮ ಹೆಸರಿನಲ್ಲಿ ಖಾತೆ ಬದಲಾವಣೆ ಮಾಡಿಕೊಂಡಿದ್ದೇನೆ. ನಾನು ವಾದ ಪತ್ರದಲ್ಲಿ ದಾವಾ ಸ್ವತ್ತು ಒಟ್ಟು ಕುಟುಂಬದ ಸ್ವತ್ತು ಎಂದು ಹೇಳಿದ್ದೇನೆ. ನಮ್ಮ ಕುಟುಂಬದಲ್ಲಿ ದಿನಾಂಕ : 20.05.1978 ರಲ್ಲಿ ಪಂಚಾಯಿತಿ ವಿಭಾಗಪತ್ರ ಆಗಿಲ್ಲ. ನಿ ಪಿ 1 ರಲ್ಲಿ ಬರೆಸಿರುವ ವ್ಯಕ್ತಿಗಳ ಹೆಸರು , ವಯಸ್ಸು ಸರಿಯಾಗಿದೆ. ಜಿಲ್ಲಾಧಿಕಾರಿಗಳ ಆದೇಶದಂತೆ ನನ್ನ ಹೆಸರಿನಲ್ಲಿ ಖಾತೆ ಆಗಿದೆ. 1992-93 ರಲ್ಲಿ ರಾಮನಗರ ಡಿ ಸಿ ಇವರಿಂದ ಆದೇಶವಾಗಿದೆ. 1992 ರಲ್ಲಿ ರಾಮನಗರ ಜಿಲ್ಲೆ ಅಸ್ತಿತ್ವದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಡಿ ಸಿ ಆದೇಶವನ್ನು ಕೊಟ್ಟಿದ್ದೇನೆ ಎಂದು ಸಾಕ್ಷಿ ಹೇಳುತ್ತಾರೆ. ನಿ ಪಿ 4 ರಿಂದ ನಿ ಪಿ 9 ರವರೆಗಿನ ಫೋಟೋಗಳನ್ನು ಪ್ರತಿವಾದಿಗಳ ಸ್ವತ್ತಿನಲ್ಲಿ ಅವರು ಬೆಳೆದ ಬೆಳೆ ಮುಂದೆ ನಿಂತು ನಾನು ತೆಗೆಯಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವತ್ತೂ ಅಪ್ಪೇರಹಳ್ಳಿ ಗ್ರಾಮದಲ್ಲಿ ವಾಸವಿರಲಿಲ್ಲ ಎಂದರೆ ಸರಿಯಲ್ಲ. ನಾನು ಈಗ ವಾಸವಿರುವ ಸ್ಥಳಕ್ಕೆ ಮತ್ತು ದಾವಾ ಸ್ವತ್ತು ಇರುವ ಸ್ಥಳಕ್ಕೆ 30 ಕಿ.ಮೀ ಆಗುತ್ತದೆ ಎಂದರೆ ಸರಿಯಲ್ಲ, 15 ಕಿ.ಮೀಟರ್ ಆಗುತ್ತದೆ ಎಂದು ಸಾಕ್ಷಿ ಹೇಳುತ್ತಾರೆ.

ನಮ್ಮ ತಾತ ತೀರಿಕೊಂಡ ನಂತರ ದಾವಾ ಸ್ವತ್ತು ನಮ್ಮ ತಂದೆಯ ಹೆಸರಿನಲ್ಲಿ ಖಾತೆಯಾಗಿರಲಿಲ್ಲ. ನಮ್ಮ ತಾತ ತೀರಿಕೊಂಡ 5-6 ವರ್ಷಗಳ ನಂತರ ದಾಖಲೆ ಹುಡುಕಿಕೊಂಡಿದ್ದೇವೆ. ಆ ಸಮಯಕ್ಕೆ ದಾವಾ ಸ್ವತ್ತನ್ನು ನಾವೇ ಮಾಡುತ್ತಿದ್ದೇವು. 1ನೆ ಪ್ರತಿವಾದಿಯ ಗಂಡ ಮುತ್ತರಾಜು ಎಂದರೆ ಸರಿ. ನಾವು 4-5 ಜನರ ವಿರುದ್ದ ದಾವೆ ಮಾಡಿದ್ದೇವೆ. ನಮ್ಮ ತಾತ ಬದುಕಿದ್ದಾಗ ನನ್ನ ಹೆಸರಿನಲ್ಲಿ ಕ್ರಯಪತ್ರವಾಗಲಿ, ದಾನಪತ್ರವಾಗಲಿ ಬರೆದುಕೊಟ್ಟಿಲ್ಲ. 1ನೆ ಪ್ರತಿವಾದಿಯ ಗಂಡ ದಿನಾಂಕ : 16.08.2018 ರಲ್ಲಿ ತೀರಿಕೊಂಡಿದ್ದಾರೆ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ಮುತ್ತುರಾಜು ಜೀವಂತ ಇರುವವರೆಗೆ ಅವರು ಸ್ವಾಧೀನದಲ್ಲಿದ್ದರು ಮತ್ತು ಅವರ ನಂತರ 1ನೆ ಪ್ರತಿವಾದಿಯು ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ.

ಓ ಎಸ್ 19/20018 ರ ಬಗ್ಗೆ ನನಗೆ ಯಾವುದೆ ಮಾಹಿತಿ ಇಲ್ಲ. ಅದರ ವಿಷಯ ನಾನು ನಮ್ಮ ವಕೀಲರಿಗೆ ಹೇಳಿಲ್ಲ. 1ನೆ ಪ್ರತಿವಾದಿ ಅಪ್ಪೇರಹಳ್ಳಿಯಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. ಆ ಗ್ರಾಮ ದಾವಾ ಸ್ವತ್ತಿನಿಂದ 1 ಕಿ.ಮೀ. ದೂರದಲ್ಲಿದೆ ಎಂದರೆ ಸರಿ. ನಮ್ಮ ತಂದೆಗೆ ನಾವು ಒಟ್ಟು 8 ಜನ ಮಕ್ಕಳೆಂದರೆ ಸರಿ. ನಾವು 8 ಜನ ಸೇರಿ ಕೇಸ್ ಮಾಡಿಲ್ಲ. ಒಟ್ಟು ಕುಟುಂಬದ ಪೈಕಿ ನಾನೇ

ದಾವೆ ಮಾಡಿದ್ದೇನೆಂದು ಸಾಕ್ಷಿ ಹೇಳುತ್ತಾರೆ. ನಮ್ಮ ತಂದೆಯ ಮಕ್ಕಳ ಪೈಕಿ ಇಬ್ಬರು ಮುತ್ತುರಾಜ ಇರುತ್ತಾರೆ ಎಂದರೆ ಸರಿ. 1 ನೆ ಪ್ರತಿವಾದಿ ಏನು ತಕರಾರು ಹಾಕಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿಗಳು ನಮ್ಮ ಜಮೀನನ್ನು ಅಕ್ರಮವಾಗಿ ಮಾಡಿಕೊಳ್ಳಲು ಮಾಡಿದ್ದರು ಅದಕ್ಕೆ ಅವರ ವಿರುದ್ದ ದಾವೆ ಮಾಡಿದ್ದೇನೆಂದು ಸಾಕ್ಷಿ ಹೇಳುತ್ತಾರೆ. ಪ್ರತಿವಾದಿಗಳು ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ಅವರು ನನ್ನ ಸ್ವಾಧೀನಕ್ಕೆ ತೊಂದರೆ ಮಾಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

1 ನೆ ಪ್ರತಿವಾದಿಯ ಗಂಡ ಮುತ್ತುರಾಜು ಇವರಿಗೆ ಸಿದ್ದಯ್ಯನ ಮಗ ಮುತ್ತುರಾಜು ಎನ್ನುತ್ತಿದ್ದರು ಎಂದರೆ ಸರಿ. ಮುತ್ತುರಾಜು ಇವರಿಗೆ ಇಬ್ಬರು ಹೆಂಡತಿಯರು ಎಂದರೆ ಸರಿ. ಅವರೆಂದರೆ ಜಯಮ್ಮ ಮತ್ತು ಸರಸ್ವತಮ್ಮ ಎಂದರೆ ಸರಿ. ಜಯಮ್ಮ ಇವರು ಮುತ್ತುರಾಜು ತೀರಿಕೊಳ್ಳುವ 15 ದಿನಗಳ ಮುಂಚೆ ತೀರಿಕೊಂಡಿದ್ದರು ಎಂದರೆ ಸರಿ. ದಾವಾ ಸ್ವತ್ತು ನಮ್ಮ ತಾತನಿಗೆ ಮಂಜೂರಾದ ಸ್ವತ್ತಲ್ಲ ಮತ್ತು ಅದು ನಮಗೆ ಪಿತ್ರಾರ್ಜಿತ ಸ್ವತ್ತು ಅಲ್ಲ ಎಂದರೆ ಸರಿಯಲ್ಲ. ಮುತ್ತುರಾಜಯ್ಯ ಇವರಿಗೆ ಮಾಗಡಿ ತಹಶೀಲ್ದಾರ್ ಇವರು ಸ.ನಂ. 52 ರಲ್ಲಿ 2 ಎಕರೆ 22 ಗುಂಟೆ ಮಂಜೂರು ಮಾಡಿದ್ದಾರೆ ಎಂದರೆ ಸರಿ. ಅದರಲ್ಲಿ ಮುತ್ತುರಾಜು ಇವರು ಮಂಜೂರು ಆಗುವ ಮೊದಲಿನಿಂದಲೂ ಸ್ವಾಧೀನದಲ್ಲಿದ್ದರು ಎಂದರೆ ಸರಿಯಲ್ಲ. ಮುತ್ತುರಾಜು ಇವರಿಗೆ ಮಂಜೂರಾದ ಜಮೀನಿಗೆ ಖಾತೆ ಪಹಣಿ ಆಗಿದೆ ಎಂದರೆ ಸರಿ. ಅದಕ್ಕೆ ಸಂಬಂಧಿಸಿದ ಕಿಮ್ಮತ್ತಿನ ಹಣವನ್ನು ಅವರು ಕಟ್ಟಿದ್ದಾರೆ ಎಂದರೆ ಸರಿ. ಸರ್ಕಾರ ಅವರ ಸ್ವಾಧೀನವನ್ನು ಗುರುತಿಸಿ ಮಂಜೂರು ಮಾಡಿದ್ದಾರೆ ಎಂದರೆ ಸರಿಯಲ್ಲ.

ಮುತ್ತುರಾಜಯ್ಯ ಇವರ ಮೊದಲನೆ ಹೆಂಡತಿ ಜಯಮ್ಮ ಇವರ ಹೆಸರಿನಲ್ಲಿ ಅದೇ ಸ.ನಂ. ನಲ್ಲಿ 2 ಎಕರೆ ಮಂಜೂರು ಆಗಿದೆ ಎಂದರೆ ಸರಿ. ಅದೇ ರೀತಿ ಅವರ ಹೆಸರಿನಲ್ಲಿ ಖಾತೆ ಪಹಣಿಗಳು ಆಗಿವೆ ಎಂದರೆ ಸರಿ. ಅವರಿಬ್ಬರ ಅನುಭವವನ್ನು ಗುರುತಿಸಿ ಸರ್ಕಾರ ಅವರಿಗೆ ಮಂಜೂರು ಮಾಡಿದೆ ಎಂದರೆ ಸರಿಯಲ್ಲ. ಮುತ್ತುರಾಜು ಇವರ ಹೆಂಡತಿ ಜಯಮ್ಮ ಬದುಕಿದ್ದಾಗ 1 ನೆ ಪ್ರತಿವಾದಿಗೆ ನೊಂದಾಯಿತ ವಿಲ್ ಬರೆದುಕೊಟ್ಟಿದ್ದರು ಎಂದರೆ ಸರಿ. ಆ ಪ್ರಕಾರ ಖಾತೆಗೆ ಅವರು ಅರ್ಜಿ ಕೊಟ್ಟಿದ್ದರು. ಮುತ್ತುರಾಜು ಇವರಿಗೆ ಕೊಟ್ಟ 2 ಎಕರೆ 22 ಗುಂಟೆ ಜಮೀನು 1 ನೆ ಪ್ರತಿವಾದಿಯ

ಹೆಸರಿಗೆ ಪೌತಿ ಖಾತೆಯಾಗಿದೆ ಎಂದರೆ ಸರಿ. 1ನೆ ಪ್ರತಿವಾದಿ ಗಂಡನ ಮೂಲಕ ಪಡೆದಿದ್ದ ಜಮೀನು ಮತ್ತು ವಿಲ್ ಮೂಲಕ ಪಡೆದಿದ್ದ ಜಮೀನುಗಳು ಅಕ್ಕ ಪಕ್ಕದಲ್ಲಿವೆ ಎಂದರೆ ಸರಿಯಲ್ಲ. 1 ನೆ ಪ್ರತಿವಾದಿಯ 4 ಎಕರೆ 21 ಗುಂಟೆ ಸ್ವತ್ತಿಗಾಗಿ ನಾನು ದಾವೆ ಮಾಡಿದ್ದೇನೆ ಎಂದರೆ ಸರಿಯಲ್ಲ. ಮೇಲೆ ಹೇಳಿದ ಚೆಕ್ ಬಂದಿಯ ಮದ್ಯದ ಸ್ವತ್ತಿನಲ್ಲಿ 1ನೆ ಪ್ರತಿವಾದಿ ಸ್ವಾಧೀನದಲ್ಲಿರುತ್ತಾರೆಂದರೆ ಸರಿಯಲ್ಲ. ಪ್ರತಿವಾದಿ 2 ಮತ್ತು 3 ರವರು 1ನೆ ಪ್ರತಿವಾದಿಯ ಗಂಡನ ಸಹೋದರರು ಎಂದರೆ ಸರಿ. ನಾವು ಪ್ರತಿವಾದಿಗಳ ಬಳಿ ಹೋಗಿ ನಮ್ಮ ಜಮೀನು ಬಿಟ್ಟುಕೊಡಿ ಎಂದು ಕೇಳಿದ್ದೇವು ಎಂದರೆ ಸರಿಯಲ್ಲ. ಅವರು ಕೊಡದೆ ಇದ್ದಾಗ ದಾವೆ ಮಾಡಿದ್ದೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನಾನು ಯಾವತ್ತೂ ಸ್ವಾಧೀನದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ.

1ನೆ ಪ್ರತಿವಾದಿಯ ಹೆಸನರಿಲ್ಲಿ ಖಾತೆ ಪಹಣಿ ಮಾಡಲು ತಹಶೀಲ್ದಾರ್ ಆದೇಶ ಮಾಡಿದ್ದಾರೆ ಎಂದರೆ ಸರಿ. ಆದರೆ ನಮ್ಮ ಜಮೀನಿಗಾಗಿ ಮಾಡಲು ಹೇಳಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಸ.ನಂ. 52ರಲ್ಲಿ ನಮ್ಮ ತಾತನಿಗೆ ಜಮೀನು ಮಂಜೂರಾಗಿತ್ತು ಮತ್ತು ಹಕ್ಕು ಪತ್ರ ಕಳೆದಿದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕಂದಾಯ ಅಧಿಕಾರಿಗಳ ಜೊತೆ ಸೇರಿಕೊಂಡು ದಾಖಲೆಗಳನ್ನು ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಮ್ಮ ತಾತನ ಹೆಸರಿನಲ್ಲಿ ಖಾತೆಯಾದ ಬಗ್ಗೆ ಯಾವುದೆ ದಾಖಲೆಗಳನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನಾವು ಸ್ವಾಧೀನದಲ್ಲಿ ಇಲ್ಲದ ಕಾರಣ ಯಾವುದೆ ಪರಿಹಾರ ಪಡೆಯಲು ಅರ್ಹರಲ್ಲ ಎಂದರೆ ಸರಿಯಲ್ಲ.

ನಿ ಪಿ 3 ಸೃಷ್ಟಿ ಮಾಡಿಕೊಂಡ ದಾಖಲೆ ಇರುತ್ತದೆ ಎಂದರೆ ಸರಿಯಲ್ಲ. ನಿ ಪಿ 3 ರಲ್ಲಿ ಕಾಲಂ ನಂಬರ್ 11 ರಲ್ಲಿ ವಿಭಾಗ ಎಂದು ಬರೆದಿದ್ದು ಏನು ಎಂದು ಗೊತ್ತಿಲ್ಲ. ಡಿ ಸಿ ಆದೇಶದ ಮೇಲೆ ಮುತ್ತುರಾಜ್ ಇವರ ಹೆಸರಿನಲ್ಲಿ ಖಾತೆಯಾಗಿದೆ ಎಂದು ಬರೆದಿದೆ. ದಾವಾ ಸ್ವತ್ತಿನ ಖಾತೆಗಳು ಈಗ 1ನೆ ಪ್ರತಿವಾದಿಯ ಕುಟುಂಬದ ಹೆಸರಿನಲ್ಲಿ ಬರುತ್ತಿವೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಅಕ್ಕ ಪಕ್ಕದವರನ್ನು ಕರೆಯಿಸಿ ಸಾಕ್ಷಿ ಹೇಳಿಸುತ್ತೇನೆ. ನಾನು ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಃ ಇಲ್ಲ**

(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಓ

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,

ಮಾಗಡಿ.